**ಅ.ದಾ.ಸಂ. 161/2020 ಪಿ.ಡಬ್ಲೂ.1**

**<u>ದಿನಾಂಕಃ 16.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ಶ್ರೀ ಎನ್.ಎಸ್. ವಕೀಲರಿಂದಃ</u>**

1) ನಿಪಿ.12 ರ ಕ್ರಯ ಪತ್ರವನ್ನು ಅಮೀರ್ ಬೀ, ರೆಹಮತ್ ಉನ್ನೀಸಾ ಮತ್ತು ಫಾತೀಮಾ.ಬಿ ರವರು ಸೇರಿ ಎಲ್.ಸಿ ಶ್ರೀನಿವಾಸಯ್ಯ ರವರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ನಿಪಿ.12 ರ ಕ್ರಯ ಪತ್ರದಲ್ಲಿ ತಿಳಿಸಿರುವಂತೆ ಚಕ್ಕುಬಂದಿ ಮತ್ತು ವಿಸ್ತೀರ್ಣ ವಾದ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ.3 ರ ದಾಖಲೆಯಲ್ಲಿ ನಮೂದು ಮಾಡಿರುವ ಚಕ್ಕುಬಂದಿ ತಪ್ಪಾಗಿದೆ ಎಂದರೆ ಸರಿಯಲ್ಲ. ವಾದ ಪತ್ರದ ಅನುಸೂಚಿಯಲ್ಲಿ ತಿಳಿಸಿರುವ ಚಕ್ಕುಬಂದಿಯ ಪೂರ್ವ ದಿಕ್ಕಿಗೆ ಭಾಗ್ಯಮ್ಮ ರವರ ಸ್ವತ್ತು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಿವೇಶನ ಆಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತನ್ನು ನೀವು ಖರೀದಿ ಮಾಡಿದ ದಿನದಿಂದಲೂ ಅಲ್ಲಿ ಕೃಷಿ ಚಟುವಟಿಕೆಗಳನ್ನು ಮಾಡುತ್ತಿದ್ದೀರೀ ಎಂದರೆ ಸರಿಯಲ್ಲ.

2) ನಿಡಿ.3 ರಿಂದ 6 ರವರೆಗಿನ ಪಹಣಿ ಪತ್ರಿಕೆಗಳಲ್ಲಿ ನನ್ನ ಹೆಸರಿನ ಜೊತೆಗೆ ಇನ್ನೂ ಅನೇಕ ಜನರ ಹೆಸರುಗಳು ಉಳುಮೆದಾರರ ಕಾಲಂ ನಲ್ಲಿ ನಮೂದಾಗಿದೆ ಎಂದರೆ ಸರಿ. ಸಾಕ್ಷಿಯು ಅವರದ್ದೂ ಸಹಾ ನಿವೇಶಗಳು ಇರುವುದಾಗಿ ನುಡಿಯುತ್ತಾರೆ. ನಿಡಿ.5 ರ ದಾಖಲೆಯಲ್ಲಿ ಕಾಣುವ ಭಗವಾನ್ ಎಂಬ ಹೆಸರಿಗೆ ವ್ಯಕ್ತಿಗೆ ಸೇರಿದ ಜಾಗದಲ್ಲಿ ಗ್ಯಾರೇಜ್ ಇದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಿಡಿ.6 ರ ಪ್ರಕಾರ ದಾವಾ ಸ್ವತ್ತಿನಲ್ಲಿ ಕೃಷಿ ಭೂಮಿ ಇದೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಪಹಣಿ ಪತ್ರಿಕೆಗಳಲ್ಲಿ ನಮೂದು ಮಾಡಿರುವ ಇನ್ನಿತರೆ ಜನರು ಅಲ್ಲಿ ವ್ಯವಸಾಯ ಮಾಡುತ್ತಾರೆಯೇ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಬೆಳೆಗಳನ್ನು ಬೆಳೆಯಲು ಯಾವುದೇ ನೀರಿನ ಸೌಕರ್ಯ ಇರುವುದಿಲ್ಲ. ದಾವಾ ಸ್ವತ್ತಿನ ಕಂದಾಯ ದಾಖಲೆಗಳಲ್ಲಿ ದಾವಾ ಸ್ವತ್ತು ಕೃಷಿ ಭೂಮಿ ಎಂದು ನಮೂದಾಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

3) ದಾವಾ ಸ್ವತ್ತಿನ ಸುತ್ತಮುತ್ತ ಅನೇಕ ಜನರು ವಾಸವಾಗಿದ್ದು ಅದೇ ರೀತಿ ದಾವಾ ಸ್ವತ್ತಿನ ಬಳಿ ದರ್ಗಾ ಸಹ ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಅಕ್ಕಪಕ್ಕದಲ್ಲಿ 60 ಮನೆಗಳು ಇವೆ ಎಂದರೆ ಸರಿಯಲ್ಲ. ಅವರೆಲ್ಲರೂ 200- 300 ವರ್ಷಗಳಿಂದಲೂ ವಾಸವಿದ್ದು ದರ್ಗಾವನ್ನು 4 ಕುಟುಂಬಗಳು ನೋಡಿಕೊಳ್ಳುತ್ತವೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಪಕ್ಕದಲ್ಲಿ ಉರುಸ್ ನಡೆಯುತ್ತಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಒಳಗೊಂಡಂತೆ ಅದರ ಸುತ್ತಮುತ್ತಲಿನ ಜಾಗವು ವಕ್ಫ ಸಂಸ್ಥೆಗೆ ಸೇರಿದ ಜಾಗ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಶಾಂತಿ ಭಂಗ ಉಂಟು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನೀವು ಅಲ್ಲಿ ಶಾಂತಿಭಂಗ ಮಾಡಿರುವ ಕಾರಣ ಪೊಲೀಸರು ನಿಮಗೆ ತಿಳುವಳಿಕೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ತಾನು ಪೊಲೀಸರಿಂದ ರಕ್ಷಣೆ ಕೇಳಿರುವುದಾಗಿ ನುಡಿಯುತ್ತಾರೆ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**